ಶ್ರೀ ಹಂಪಿ ಶಿವಣ್ಣ.—ತಾವು ಮಾಡಿದ್ದು ತಮಗೆ ಸರಿಯಾಗಿದೆಯೆಂದು ಕಾಣುತ್ತದೆಯೇ ?

ಶ್ರೀ ಬಿ. ಪಿ. ಗಂಗಾಧರ್.—ಒಬ್ಬರಿಗೆ ಅವಕಾಶ ಕೊಡುವುದು, ಇನ್ನೊಬ್ಬರಿಗೆ ಬಿಡುವುದು, ಇದು ಯಾವ ನ್ಯಾಯ ಸ್ವಾಮಿ ?

Mr. DEPUTY SPEAKER.—Order ! Order! I request the hon. Member to resume his seat. I have called the next Question.

The Value of the Products Produced by the Tumminakatte Village Society

36. Sri N. L. BELLAD (Ranibennur).—

Will the Minister for Development be pleased to state :—

(*a*) the value of the products produced by the Tumminakatte Village Society, Tumminakatte, Ranibennur Taluk from its industries started out of the loan and subsidy granted by the Khadi Board together with the years in which they were produced;

(*b*) whether the accounts of this society have been audited by the Khadi Board and if so, whether the audited report will be supplied;

(*c*) the years in which and the quantity of soap and Oil has been produced and the number of chairs, tables, etc., manufactured from the industries started by this Society ?

Sri P. M. NADGOUDA (Minister for Development).—

(*a*) Details are as follows :

Year		*Value of production*
1963–64	...	2,697–00
1964–65	...	7,492–17
1965–66	...	16,917–84
1966–67	...	14,395–40
1967–68	...	194–74
1968–69	...	313–13
1969–70 (upto May 1969)	...	60–00

(*b*) Yes; will be supplied.

(*c*) Detailed statement appended.

(SRI P. M. NADGOUDA)

STATEMENT

Sl. No.	*Industry*		*Years*	*Production*
1.	Village oil	...	1964-65	4,999.30
		...	1965-66	7,040.80
		...	1966-67	8,940.50
2.	Non-edible oil and soap (collection of seeds)	...	1963-64	175.88
			1964-65	1,257.60
			1965-66	1,667.76
3.	*Carpentry and Blacksmithy 1963-64*			
	1 Chairs (12)	...	168.00	
	2 Cupboards (3)	...	198 00	
	3 Benches (3)	...	57.00	
	4 Tables (4)	...	120.00	
	5 Easy Chairs (20)	...	240.00	
	6 Kurpi handles (400)	...	44.00	
	7 Konigi (1 ℓ)	...	42.00	
	8 Kurpies (4)	...	12.00	
	9 Handles (20)	...	4.00	
	10 Cocking handles (48)	...	12.00	
	11 Door Frames (5)	...	170.00	
				1,067.00
	1964-65			
	1 Chairs (10)	...	140.00	
	2 Cupboards (8)	...	640.00	
	3 Benches (10)	...	190.00	
	4 Tables (4)	...	160.00	
	5 Easy Chairs (10)	...	70.00	
	6 Kurpies (4)	...	12.00	
	7 Planks (10)	...	20.00	
	8 Cocking handles (50)	...	12.25	
	9 Nails	...	50.00	
	10 Nuts and Bolts	...	50.00	
	11 Iron Bars	...	200.00	
				1,544.25

Sl.No.	Industry	Years	Production	
		1965–66		
1	Kisan Charakas (25)	...	151.50	
2	Tables (2)	...	26.50	
3	Planks (18)	...	36.00	
4	Desks (2)	...	11.50	
5	Windows (4)	...	76.00	
6	Desk (1)	...	19.50	
7	Door Frames (5)	...	196.00	
8	Cocking handles (12)	...	3.00	
9	Handles (5)	...	1.00	
10	Kurpies (1)	...	12.00	
11	Handles (386)		46.46	
12	Easy Chairs (10)	...	70.00	
13	Tables (2)	...	80.00	
14	Benches (3)	...	57.00	
15	Chairs	...	168.00	
				853.46
	1966–67 1967–68 1968–69	No production in these years.		

4. Khadi	*1965–66*	Rs. P.	
1	Khadi	114×482=1,243·77	
2	,,	90×472=1,086·37	
3	,,	80×538=1,139·33	
	Towels	(376)= 912·06	
	Dhoties	(150)=1,664·26	
	Bedsheets	=1,972·21	
			6,243·12
	1966–67		
1	Khadi 80×1980	4,235·64	
2	Bed sheets	195·65	
3	Towels	523·06	
			4,954.35
	1967–68		
1	Khadi 90×62	...	194·74
	1968–69		
1	Khadi Saries and dhoties (up to February)		313.13
	1969–70 (Up to end of May 1969)		
	Khadi thread	...	60·00

ಶ್ರೀ ಎನ್. ಎಲ್ ಬೆಲ್ಲದ್.—ತಾವು ಕೊಟ್ಟಿರುವ ಉತ್ತರದಲ್ಲಿ ಏರೇಜ್ ಆಯಿಲ್, ನಾನ್ ಎಡಿಬಲ್ ಆಯಿಲ್ ಮತ್ತು ಸೋಪು ಮುಂತಾದುವುಗಳನ್ನು ಉತ್ಪಾದನೆ ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಸಂಸ್ಥೆಯವರು ಎಣ್ಣೆ ತೆಗೆಯುವಂತಹ ಗಾಣಗಳನ್ನು ಹಾಕಿಲ್ಲ, ನಾನ್ ಎಡಿಬಲ್ ಆಯಿಲ್ ಉತ್ಪಾದನೆ ಮಾಡಿಲ್ಲ, ಸೋಪು ಮಾಡುವ ಸಾಮಗ್ರಿ ಇಲ್ಲವೇ ಇಲ್ಲ. ಹೀಗಿರುವುದರಿಂದ, ಇವೆಲ್ಲಾ ಉತ್ಪಾದನೆ ಹೇಗೆ ಬಂದವು ಎಂದು ತಿಳಿಸುತ್ತೀರಾ?

† ಶ್ರೀ ಬಿ. ಎಲ್. ಗೌಡ (ಸಹಕಾರ ಶಾಖೆಯ ಉಪಮಂತ್ರಿಗಳು).—ಅವರು ಖಾದಿಯನ್ನು, ಮರದ ಸಾಮಾನುಗಳನ್ನು, ಕುರ್ಚಿ ಬೆಂಚುಗಳನ್ನು ಉತ್ಪಾದನೆ ಮಾಡಿದ್ದಾರೆ.

ಶ್ರೀ ಎನ್. ಎಲ್ ಬೆಲ್ಲದ್.—ನೀವು 1966-67, 1968-69ರಲ್ಲಿ ಏನೂ ಉತ್ಪಾದನೆ ಮಾಡಿಲ್ಲವೆಂದು ಹೇಳಿದ್ದೀರಿ. ಅಂದಮೇಲೆ ಇದನ್ನು ಕ್ಲೋಸ್‌ಮಾಡಿ, ಕೊಟ್ಟ ಗ್ರಾಂಟನ್ನು ವಸೂಲು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ. ಎಲ್. ಗೌಡ.—ಅವರು 1966-67ರಲ್ಲಿ ಖಾದಿ, ಬೆಡ್ ಶೀಟ್‌ಗಳು, ಟವಲ್ಲುಗಳು ಎಲ್ಲಾ ಉತ್ಪಾದನೆ ಮಾಡಿದ್ದಾರೆ. ಇತ್ತೀಚೆಗೆ ಜನರಲ್ ಬಾಡಿಯಲ್ಲಿ ಹುರುಪಿನ ಜನರು ಬಂದು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ನಾಲ್ಕುಸಾವಿರ ಚಿಲ್ಲರೆ ರೂಪಾಯಿಯ ಖಾದಿ ಉತ್ಪಾದನೆ ಮಾಡಿದ್ದಾರೆ. ಉಲ್ಲನ್ ಉತ್ಪಾದನೆ ಮಾಡಿದ್ದಾರೆ. ಅಲ್ಲಿ 135 ಜನ ಕೆಲಸದಲ್ಲಿದ್ದಾರೆ. ಈ ಎಲ್ಲಾ ವಿಧದಿಂದ ಆ ಸಂಘ ಕೆಲಸ ಮಾಡುತ್ತದೆ.

ಶ್ರೀ ಎನ್. ಎಲ್. ಬೆಲ್ಲದ್.—ತಾವು ಏನು ಹೇಳುತ್ತೀರಿ, ಅದು ಒಂದೂ ಇಲ್ಲಿ ನಡೆಯುವುದಿಲ್ಲ.

ಶ್ರೀ ಬಿ. ಎಲ್. ಗೌಡ.—ಸಹಕಾರ ಸಂಘ ಕೆಲಸಗಳನ್ನು ಮಾಡಿದೆ. ಇನ್ನೂ ಚೆನ್ನಾಗಿ ಮಾಡುಹುದೆಂಬ ಆಶೆ ಇದೆ.

ಶ್ರೀ ಬಿ. ಪಿ. ಗಂಗಾಧರ್.—ಸ್ಪೀಮಿ, ನಾನು ಕೇಳಿದ ಪಾಯಿಂಟಿಗೆ ನಿರ್ದಿಷ್ಟವಾದ ತೀರ್ಮಾನವನ್ನು ಕೊಡಿ. ಅದರಿಂದ ನನ್ನ ಮರ್ಯಾದೆಗೆ ಧಕ್ಕೆ ಬಂದಿದೆ. ನೀವು ಮಾಡುತ್ತಿರುವುದು ಧರ್ಮವಲ್ಲ, ನ್ಯಾಯವಲ್ಲ.

ಶ್ರೀ ಹಂಜಿ ಶಿವಣ್ಣ.—ಏನು ಸ್ಪೀಮಿ, ಬೇರೆಯವರು ಸದಸ್ಯರಲ್ಲವೇ ನೀವು ಹಾಗೆ ತಾರತಮ್ಯ ಮಾಡುವುದಕ್ಕೆ? ಎಲ್ಲರಿಗೂ ಅವಕಾಶ ಕೊಡಬೇಕು.

Sri B. P. GANGADHAR.—You have been showing discrimination.

Mr. DEPUTY SPEAKER.—It is left to the discretion of the Chair.

Sri B. P. GANGADHAR.—Does discretion according to you mean discrimination between member and member? You must express regret for what you have done. I am really sorry for you.

Mr. DEPUTY SPEAKER.—Order, Order, Hon. Member will please resume his seat.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಬೆಲ್ಲದ್‌ರವರು ಹೇಳಿದರು, ತಾವು ಏನು ಐಟಂಗಳು ತಯಾರಾಗಿವೆ ಎಂದು ಹೇಳಿದ್ದೀರಿ, ಅದು ತಯಾರಾಗಿಲ್ಲವೆಂದು. ನೀವು ಅಲ್ಲಿ 135 ಜನ ಕೆಲಸ ಮಾಡುತ್ತಿದ್ದಾರೆ, ಖಾದಿ ತಯಾರು ಮಾಡಿದ್ದಾರೆ ಇತ್ಯಾದಿ ಹೇಳಿದ್ದೀರಿ. ಇದರಿಂದ ಅವರ ಸ್ಟೇಟ್‌ಮೆಂಟ್ ನಿಜವೇ, ಅಥವಾ ನಿಮ್ಮ ಸ್ಟೇಟ್‌ಮೆಂಟ್ ಸತ್ಯಕ್ಕೆ ದೂರವಾದುದೇ? ಮಾನ್ಯ ಸದಸ್ಯರು ಜವಾಬ್ದಾರಿ ತೆಗೆದುಕೊಂಡು ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕಲೆಕ್ಟ್ ಮಾಡಿ ಹೇಳುತ್ತಿದ್ದಾರೆ. ಆದ್ದರಿಂದ ಅದು ಸರಿಯಲ್ಲದಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಎಲ್. ಗೌಡ.—ಅಲ್ಲಿ ಕೆಲವಾರು ಐಟಂಗಳನ್ನು ಉತ್ಪಾದನೆ ಮಾಡಿದ್ದಾರೆ. ಅವರು ಅದನ್ನು ಮಾಡಿಲ್ಲವೆಂದು ತಿಳಿದು ಬರೆದು ಕಳಿಸಿದರೆ, ಮತ್ತು ನಮ್ಮಲ್ಲಿರುವ ವರದಿ ತಪ್ಪು ಎಂದು ಕಂಡುಬಂದರೆ ನಿಜವಾಗಿಯೂ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಎಲ್. ಬೆಲ್ಲದ್.—ಅಲ್ಲಿ ಯಾವ ಕಾರ್ಯಕ್ರಮವೂ ಇಲ್ಲ. ಒಂದು ಎಣ್ಣೆಯಾಗಲಿ, ಸೋಪಾಗಲಿ, ಫರ್ನಿಚರಾಗಲಿ ಯಾವುದೂ ತಯಾರು ಮಾಡುತ್ತಿಲ್ಲ. ಅದನ್ನು ತಮಗೆ ಮನವರಿಕೆ ಮಾಡುವುದಕ್ಕೆ ತಯಾರಿದ್ದೇನೆ.

ಶ್ರೀ ಬಿ. ಎಲ್. ಗೌಡ.—ನಾನು ಆಫೀಷಿಯಲ್ ರಿಪೋರ್ಟ್ ಪ್ರಕಾರ ಹೇಳಿದ್ದೇನೆ. ನೀವು ಇಲ್ಲವೆಂದು ಹೇಳುತ್ತೀರಿ. ನಮ್ಮ ಅಧಿಕಾರಿಗಳಿಗೆ ಅದನ್ನು ಕಳಿಸಿ ತನಿಖೆ ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಎಂ. ನಾಗಪ್ಪ.—ತಮ್ಮ ಉತ್ತರದಲ್ಲಿ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಏನೇನು ಉತ್ಪತ್ತಿಯಾಗಿದೆ ಎಂದು ಪರಿಶಿಷ್ಟದಲ್ಲಿ ಕೊಟ್ಟಿದ್ದೀರಿ. ಈಗಾಗಲೇ ತಾವು ಹೇಳಿದ್ದೀರಿ—ಹುರುಪಿನ ತರುಣರು ಬಂದಿದ್ದಾರೆ ಎಂದು. ಆ ತರುಣರು ಯಾವಾಗ ಆರಿಸಿ ಬಂದರು, ಅವರು ಎಲ್ಲಿ ಪ್ರಗತಿ ತೋರಿಸಿದ್ದಾರೆ? ಪ್ರಗತಿ ಇಳಿಮುಖವಾಗುತ್ತಾ ಇದೆ. ಅಂದ ಮೇಲೆ ಇದರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೀರಾ?

ಶ್ರೀ ಬಿ. ಎಲ್. ಗೌಡ.—ನಾನಾಗಲೇ ತಿಳಿಸಿದ್ದೇನೆ. 1966-67, 1967-68ರಲ್ಲಿ ಪ್ರಗತಿ ಸ್ಥಗಿತವಾಗಿತ್ತು. ನಂತರ ಹೊಸಬರು ಚುನಾಯಿತರಾಗಿದ್ದಾರೆ. ಚುನಾವಣೆ ಆದ ಮೇಲೆ ಉತ್ಪಾದನೆ ಪ್ರಾರಂಭವಾಗಿದೆ. ಮುಂದೆ ನೋಡಬೇಕಾಗಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅಲ್ಲಿ ಖಾದಿ ರಿಬೇಟ್ ಮುಂತಾದುವುಗಳಲ್ಲಿ ಕೆಲವು ಸುಳ್ಳು ಲೆಕ್ಕ ತೋರಿಸಿ ನಷ್ಟವಾಗಿದೆಯೇ?

ಶ್ರೀ ಬಿ. ಎಲ್. ಗೌಡ.—ಅದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಅಜೀಜ್ ಶೇಠ್.—ಪ್ರಶ್ನೆ ಕೇಳಿರುವುದು ಈಗತಾನೆ ತಮ್ಮ ಪಕ್ಷಕ್ಕೆ ಸೇರಿದ ಸದಸ್ಯರು. ನೀವು ತಮ್ಮ ಅಧಿಕಾರವರ್ಗದವರನ್ನು ನಂಬುತ್ತೀರಾ ಅಥವಾ ತಮ್ಮ ಪಕ್ಷದ ಸದಸ್ಯರನ್ನು ನಂಬುತ್ತೀರಾ?

ಶ್ರೀ ಬಿ. ಎಲ್. ಗೌಡ.—ಯಾವ ಪಕ್ಷದವರು ಇದ್ದರೂ, ಇರುವ ಅಂಕಿಅಂಶಗಳನ್ನು ಹೇಳ ಬೇಕಾಗುತ್ತದೆ, ಹೇಳುತ್ತೇನೆ.

Sri B. P. GANGADHAR.—The Chair is showing discrimination. Do not think that I am all alone and you can play in your own way. This sort of discrimination is against the dignity of the House.

Mr. DEPUTY SPEAKER.—If the hon. Member goes on disturbing, I will have to enforce the rules. No discrimination is being shown to any Member of this House. Next, question No. 43 by hon. Member Sri N. A. Channe Gowda.

Appointment of Vice-Chancellor of the Mysore and Bangalore Universities

43. Sri N. A. CHANNE GOWDA (Pandavapura).—

Will the Minister for Education be pleased to state :—

whether there is any proposal to evolve a commom procedure in the matter of appointment of the Vice-Chancellors of the Mysore and Bangalore Universities ?

Sri K. V. SHANKARA GOWDA (Minister for Education).—

No.

ಶ್ರೀ ಎನ್. ಎ. ಚನ್ನೇಗೌಡ.—ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಯಾವ ನಿಯಮದ ಮೇಲೆ ನೇಮಿಸುತ್ತೀರಿ?